ದಿಃ 19-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪುನ: ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ-**

ನಾನು ದಾವೆ ಹೂಡಿರುವ ಮನೆಯ ಆಸ್ತಿಯಲ್ಲಿ ಪ್ರತಿವಾದಿಯರು ಇದ್ದು ಅದರ ಬಾಗಿಲು ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದ ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿ.ಪಿ.13 ನ್ನು ತೋರಿಸಿದ ಹಾಗೆ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿಯಲ್ಲ. ಮುಖ್ಯ ದ್ವಾರವು ಉತ್ತರ ದಿಕ್ಕಿಗೆ ಬರುತ್ತದೆ ಎಂದು ಹೇಳುತ್ತಾರೆ.

ಮುಖ್ಯ ದ್ವಾರವನ್ನು ದಾಟಿದಲ್ಲಿ ಒಂದು ರಸ್ತೆ ಹಾಗೂ ಚರಂಡಿ ಇರುತ್ತದೆ ಎಂದರೆ ಸರಿ. ನನ್ನ ಸಾಕ್ಷಿ ಪ್ರ.ಪತ್ರದಲ್ಲಿ ಹೇಳಿದ ಹಾಗೆ ನಾನು ಇರುವ ಮನೆಯು ಸರ್ವೆ ನಂ.15/5 ರಲ್ಲಿ ಇರುತ್ತದೆ ಎಂದು ಖೊಟ್ಟಿಯಾಗಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ಒಂದು ಗಣಕೀಕೃತ ಉತಾರೆಯನ್ನು ತೋರಿಸಿ ಆ ಜಾಗೆಯು ಲಕ್ಷ್ಮೀಕಾಂತ ತಂದೆ ಸಾಯಿಬಣ್ಣ ಇವರ ಹೆಸರಿಗೆ ಸೇರಿರುವ ಉತಾರಾಗಿರುತ್ತದೆ ಎಂದು ಹೇಳಿದ್ದು ಅದನ್ನು ಸಾಕ್ಷಿದಾರರು ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಲಾಯಿತು.

ಸದರಿ ನಿ.ಡಿ.1 ರ ಕಾಲಂ ನಂ.11 ರಲ್ಲಿ ಮನೆ ಇರುವಿಕೆ ಕುರಿತು ಅಥವಾ ಕಟ್ಟಡ ನಿರ್ಮಾಣ ವಾಗಿರುವ ಕುರಿತು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯು ಒಂದು ಸಾಗುವಳಿ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತು ಲಕ್ಷ್ಮೀಕಾಂತ ಎಂಬುವವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ ಹಾಗೂ ಅವರನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಸದರಿ ಲಕ್ಷ್ಮೀಕಾಂತ ಅಲ್ಲಿ ಸಾಗುವಳಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಜಮೀನು ಲಕ್ಷ್ಮೀಕಾಂತ ಎಂಬುವವರ ಮಾಲಿಕತ್ವಕ್ಕೆ ವ ಸ್ವಾಧೀನತೆಗೆ ಸೇರಿರುತ್ತದೆ ಎಂದರೆ ಸಾಕ್ಷಿದಾರರು ಮೊದಲಿಗೆ ಅದು ಸಾಯಿಬಣ್ಣನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂಬರಿಗೂ ಹಾಗೂ ದಾವಾ ಆಸ್ತಿಗೂ

ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ಇನ್ನೊಂದು ಗಣಕೀಕೃತ ಉತಾರೆಯನ್ನು ತೋರಿಸಿ ಆ ಜಾಗೆಯು ಮೃತ ಪ್ರತಿವಾದಿಯ ತಂದೆಗೆ ಹೆಸರಿಗೆ ಸೇರಿರುತ್ತದೆ ಎಂದು ಕೇಳಿದಾಗ ಸಾಕ್ಷಿದಾರರು ಅದನ್ನು ನಿರಾಕರಿಸುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.2 ಎಂದು ಗುರುತಿಸಲಾಯಿತು.

ನಿ.ಪಿ.1 ರಿಂದ 12 ರವರೆಗೆ ಯಾವ ಸರ್ವೆ ನಂಬರದಲ್ಲಿ ಮನೆ ಇರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಅದರಂತೆ ನಿ.ಪಿ.13 ರಿಂದ 15 ಭಾವಚಿತ್ರಗಳು ಬನಾವಟಿ ಹಾಗೂ ಖೊಟ್ಟೆಯಿಂದ ತೆಗೆದಿರುವ ಭಾವಚಿತ್ರಗಳಾಗಿರುತ್ತವೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ನೆಗೆಟಿವ್ಸ ನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ.1 ರಿಂದ 12 ರವರೆಗೆ ದಾವಾ ಸ್ವತ್ತಿನ ಮನೆಯ ವಿಸ್ತೀರ್ಣರಣೆ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಪಟ್ಟ ಅಂಗಳದ ಜಾಗೆಯು ಸಮಾನ ದಾರಿ ಆಗಿರುವುದಿಲ್ಲ ಅದು ಸರ್ಕಾರಿ ಜಾಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿದಾರರು ಆ ದಾರಿಯು ನಮಗೆ ಸಂಬಂಧಪಟ್ಟಿರುತ್ತದೆ ಎಂದು ನುಡಿಯುತ್ತಾರೆ.

ಸದರಿ ದಾರಿಯು ನಮ್ಮದೇ ಎಂದು ತೋರಿಸಲು ಭೂ ಮಾಪನ ಇಲಾಖೆಯಿಂದ ಸರ್ವೆಯನ್ನು ಮಾಡಿ ವರದಿಯನ್ನು ಹಾಗೂ ಗ್ರಾಮ ಪಂಚಾಯತಿ ಇವರು ಮಾಪನ ಮಾಡಿ ನೀಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಪ್ರತಿವಾದಿಯರಿಗೆ ನಾನು ಕಾಟ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧಿಕಾರಿಗಳು, ಶಹಾಬಾದ